(ಇಂದು ದಿನಾಂಕಃ 05-03-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ  ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದರಿಂದ ವಕೀಲರಾಗಿರುವ ಶ್ರೀಮತಿ ಡಿ.ಆರ್.ಯು. ವಕೀಲರನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಪಾಟೀ ಸವಾಲುಃ  ವಾದಿ ಪರಃ ಶ್ರೀ ಎನ್.ಎಂ.ಎಂ. ವಕೀಲರಿಂದಃ**

ನಾನು ಶಾಲೆಯಲ್ಲಿ ಮ್ಯಾನೇಜರ್ ಎಂದು ಕೆಲಸ ಮಾಡುತ್ತಿದ್ದೇನೆ. ನಾನು 2021 ರಿಂದ ಸದರಿ ಶಾಲೆಯಲ್ಲಿ ಮ್ಯಾನೇಜರ್ ಎಂದು ಕರ್ತವ್ಯನಿರ್ವಹಿಸುತ್ತಿದ್ದೇನೆ. 2021 ರ ಮುಂಚೆ ನಾನು ಮಹಾರಾಷ್ಟ್ರದಲ್ಲಿ ಕೆಲಸ ಮಾಡುತ್ತಿದ್ದೆ. ನಮ್ಮ ಸಂಸ್ಥೆಯಲ್ಲಿ ನಿವೃತ್ತಿ ವಯಸ್ಸು 75 ವರ್ಷ. ನಮ್ಮ ಶಾಲೆ ಕೋ-ಆಪರೇಟಿವ್ ಸೊಸೈಟಿ ಕಾಯ್ದೆ  ಅಡಿಯಲ್ಲಿ ನೋಂದಣಿಯಾಗಿ ಸದರಿ ಕಾಯ್ದೆ ಅಡಿಯಲ್ಲಿ

ಶಾಲೆ ನಡೆಸುತ್ತಿದ್ದೇವೆ ಎಂದರೆ ಸರಿ. ನಮ್ಮ ಸೊಸೈಟಿಗೆ ಬೈಲೋ ಇದೆ ಎಂದರೆ ಸರಿ. ನಾನು ಮ್ಯಾನೇಜಮೆಂಟ್ ಕಮೀಟಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಕೆಲಸವನ್ನು ವಹಿಸಬೇಕಾದರೆ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯ ಆಗುತ್ತದೆ ಎಂದರೆ ಸರಿ. ಅದೇ ರೀತಿ ನ್ಯಾಯಾಲಯಕ್ಕೆ ಹಾಜರಾಗಲು ಬೇರೆ ಯಾವುದೇ ಕಚೇರಿಯಲ್ಲಿ ಹಾಜರಾಗಲು ಆಡಳಿತ ಮಂಡಳಿಯ ಸಭೆಯಲ್ಲಿ ಠರಾವು ಆಗಬೇಕು ಎಂದರೆ ಸರಿ. ಈ ಕೇಸಿನಲ್ಲಿ ನನಗೆ ಹಾಜರಾಗಲು ನಮ್ಮ ಆಡಳಿತ ಮಂಡಳಿಯ ಸಭೆಯಲ್ಲಿ ಠರಾವು ಆಗಿದೆ. ಸದರಿ ಠರಾವಿನ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನನ್ನನ್ನು ಈ ಕೇಸಿನಲ್ಲಿ ಹಾಜರಾಗಿ ಕೇಸನ್ನುನಡೆಸಲು ಆಡಳಿತ ಮಂಡಳಿಯವರು ಮಾಡಿದಂತಹ ಠರಾವನ್ನು ಹಾಜರುಪಡಿಸಿಲು ತೊಂದರೆ ಇಲ್ಲ ಎಂದರೆ ಸರಿ. ನಾನು ಯಾವುದೇ ಠರಾವನ್ನು ಹಾಜರುಪಡಿಸದೇ ಇರುವುದರಿಂದ ನನಗೆ ಈ ಕೇಸಿನಲ್ಲಿ ಸಾಕ್ಷಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಶಾಲೆಗೆ ನಾನು ಮ್ಯಾನೇಜರ್ ಆಗಿ ಬಂದ ನಂತರ ಶಾಲೆಗೆ ಸಂಬಂಧಪಟ್ಟಂತಹ ದಾಖಲಾತಿಗಳು ಮತ್ತು ಶಾಲೆಯ ಮಾಲಿಕತ್ವದ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿದ್ದೇನೆ. ಯಾವ ಸರ್ವೆ ನಂಬರದಲ್ಲಿ ಶಾಲೆ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ನಾನು ಶಾಲೆಗೆ ಸಂಬಂಧಪಟ್ಟಂತಹ ಸಿ.ಟಿ.ಎಸ್. ನಂಬರನ್ನು ನೋಡಿದ ನೆನಪು ಇಲ್ಲ. ಶಾಲೆ 5 ಎಕರೆ ಜಮೀನಿನಲ್ಲಿ ಇದೆ. ಶಾಲೆ 5 ಎಕರೆ ಜಮೀನಿನಲ್ಲಿ ಇದೆ ಎಂದು ತೋರಿಸಲು ನಾನು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ನಾನು ಹಾಜರುಪಡಿಸಿದಂತಹ ದಾಖಲಾತಿಗಳು ಕನ್ನಡ ಭಾಷೆಯಲ್ಲಿ ಇರುವುದರಿಂದ ನನಗೆ ಹೇಳಲು ಬರುವುದಿಲ್ಲ. ಶಾಲೆ ಇರುವಂತಹ ಜಾಗೆಯನ್ನು ನಾವು ಗ್ರಾಮಸ್ಥರಿಂದ ಕ್ರಯಕ್ಕೆ ತೆಗೆದುಕೊಂಡಿದ್ದೇವೆ. ಎಷ್ಟು ಕ್ಷೇತ್ರ ಕ್ರಯಕ್ಕೆ ತೆಗೆದುಕೊಳ್ಳಲಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನಿ.ಪಿ. 8 ರ ಪ್ರಕಾರ 1965-66 ರಲ್ಲಿ ಸ.ನಂ. 1383 ಬ 2 ರಲ್ಲಿ 2 ಎಕರೆ 1 ಗುಂಟೆ 6 ಆಣೆ ಇದೆ ಎಂದರೆ ಸಾಕ್ಷಿ ಅದು

ಒಂದು ಭಾಗ ಎಂದು ಹೇಳುತ್ತಾರೆ. ಸದರಿ ನಿ.ಪಿ. 8 ರಲ್ಲಿ ಶಾಲೆಗೆ ಅರ್ಧ ಹಕ್ಕು ಎಂದು ನಮೂದಿಸಿದ್ದಾರೆ ಎಂದರೆ ಸರಿ. ಅದೇ ರೀತಿ ಅಣ್ವೇಕರ್ ಪಾಂಡುರಂಗ ಮತ್ತು ಶ್ರೀಪಾದ ಕೃಷ್ಣ ಇವರಿಗೆ ಅರ್ಧ ಭಾಗ ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

ನಿ.ಪಿ. 9 ರಲ್ಲಿ ಸಿ.ಟಿ.ಎಸ್. ನಂ. 12182 ಒಟ್ಟೂ ಕ್ಷೇತ್ರ 2400 ಚದರ ಮೀಟರ್ ಎಂದು ನಮೂದಿಸಿ ಶಾಲೆಗೆ ಅರ್ಧ ಭಾಗ ಇದೆ ಎಂದು ನಮೂದಿಸಿದ್ದಾರೆ ಎಂದರೆ ಸರಿ. ಅದೇ ರೀತಿ ನಿ.ಪಿ.10 ರ ಸಿ.ಟಿ.ಎಸ್. ನಂ. 12181 ಒಟ್ಟೂ ಕ್ಷೇತ್ರ 8136 ಚದರ ಮೀಟರ್ ಎಂದು ನಮೂದಿಸಿ ಶಾಲೆಗೆ ಅರ್ಧ ಭಾಗ ಇದೆ ಎಂದು ನಮೂದಿಸಿದ್ದಾರೆ ಎಂದರೆ ಸರಿ. ನಿ.ಪಿ.1 ರಲ್ಲಿ ಸಿ.ಟಿ.ಎಸ್. ನಂ. 12181 ಒಟ್ಟೂ ಕ್ಷೇತ್ರ 8136 ಚದರ ಮೀಟರ್ ಎಂದು ನಮೂದಿಸಿ ಶಾಲೆಗೆ ಅರ್ಧ ಭಾಗ ಇದೆ ಎಂದು ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ದಾಖಲಾತಿಯಲ್ಲಿ ಬರೆದಿರುವುದು ಸುಳ್ಳಿನಿಂದ ಕೂಡಿದೆ. ಪೂರ್ತಿ ಕ್ಷೇತ್ರ ನಮ್ಮ ಶಾಲೆಗೆ ಇದ್ದು, ಕಂದಾಯ ದಾಖಲಾತಿಗಳಲ್ಲಿ ತಪ್ಪಾಗಿ ನಮೂದಾಗಿದೆ. ಪೂರ್ಣ ಆಸ್ತಿ ನಮ್ಮ ಶಾಲೆಯ ಹೆಸರಿನಲ್ಲಿ ದಾಖಲಾಗಿದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿದಂತಹ ದಾಖಲಾತಿಗಳು ಕನ್ನಡ ಭಾಷೆಯಲ್ಲಿ ಇರುವುದರಿಂದ ಯಾವ ದಾಖಲಾತಿ ಎಂದು ನನಗೆ ಗುರುತಿಸಲು ಆಗುವುದಿಲ್ಲ. ನಾನು ಹಾಜರುಪಡಿಸಿದಂತಹ ದಾಖಲಾತಿಗಳು ಕನ್ನಡ ಭಾಷೆಯಲ್ಲಿ ಇರುವುದರಿಂದ ಅವುಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಅನ್ನುವುದು ಸರಿಯಲ್ಲ. 2021 ರ ಮುಂಚೆ ನಾನು ಶಾಲೆಗೆ ಬರುವ ಮುಂಚೆ ಆಡಳಿತ ಮಂಡಳಿ ಬೇರೆ ಇತ್ತು ಎಂದರೆ ಸರಿ. ನಮ್ಮ ಶಾಲೆ ಇರುವಂತಹ ಪ್ರದೇಶ ಸಮತಟ್ಟಾದ ಪ್ರದೇಶ ಎಂದರೆ ಸರಿ. ಶಾಲೆಯ ಆವರಣದಲ್ಲಿ ಬಂದರೆ ಮೊದಲು ಆಟದ ಮೈದಾನ ನಂತರ ಶಾಲೆಯ ಕಟ್ಟಡ ಬರುತ್ತದೆ ಎಂದರೆ ಸರಿ. ಒಟ್ಟೂ ಕ್ಷೇತ್ರ ಅರ್ಧ ಭಾಗ ಆಟದ ಮೈದಾನ ಮತ್ತು ಇನ್ನುಳಿದ ಅರ್ಧ ಭಾಗದಲ್ಲಿ ಶಾಲಾ ಕಟ್ಟಡ ಇದೆ ಎಂದರೆ ಸಾಕ್ಷಿ ಸ್ವಲ್ಪ ಭಾಗ ಮಾತ್ರ ಆಟದ ಮೈದಾನ ಇದೆ ಎಂದು ಹೇಳುತ್ತಾರೆ. ಶಾಲೆಗೆ ಬಂದ ನಂತರ ಜಮೀನನ್ನು ಅಳತೆ ಮಾಡಿಸಿದ್ದೇವೆ.

ಅಳತೆ ಮಾಡಿದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಳತೆ ಮಾಡಿಸಿದ ಕ್ಷೇತ್ರದಲ್ಲಿ ಶಾಲೆ 5 ಎಕರೆ ಜಮೀನಿನಲ್ಲಿ ಇದೆ. ಸದರಿ ನಕ್ಷೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಶಾಲೆ ಇರುವಂತಹ ಜಮೀನಿನ ಮೂಲ ಮಾಲಿಕರು ಯಾರ್ಯಾರು ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ ಪಹಣಿಯಲ್ಲಿ ಯಾರೆಲ್ಲಾ ಹೆಸರುಗಳು ನಮೂದು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಕಮೀಟಿಯ ಸದಸ್ಯರಿಗೆ ನನಗಿಂತ ಚೆನ್ನಾಗಿ ಶಾಲೆಯ ಆಸ್ತಿಯ ಬಗ್ಗೆ ಗೊತ್ತಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಹಾಜರುಪಡಿಸಿದಂತಹ ನಿ.ಪಿ.1 ರಿಂದ ನಿ.ಪಿ.4, ನಿ.ಪಿ.9 ಮತ್ತು ನಿ.ಪಿ.10 ದಾಖಲಾತಿಗಳಲ್ಲಿ ಶಾಲೆಗೆ ಅರ್ಧ ಭಾಗ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ದಾಖಲೆಗಳ ಪ್ರಕಾರ ಇದೆ ಎಂದು ಹೇಳುತ್ತಾರೆ.

ನ್ಯಾಯಾಲಯದಿಂದ ನೋಟಿಸ್ ಬಂದ ನಂತರ ವಾದಿಯರು ಯಾರು ಎಂದು ನಾನು ವೈಯಕ್ತಿಕವಾಗಿ ವಿಚಾರಣೆ ಮಾಡಿಲ್ಲ. ನಾನು ಯಾವುದೇ ತೀರ್ಮಾನಕ್ಕೆ ಬರುವ ಮುಂಚೆ ಕಮೀಟಿಯ ಮುಂದೆ ಇಟ್ಟು ಠರಾವು ಮಾಡುತ್ತಾರೆ ಎಂದರೆ ಸರಿ. ನಮ್ಮ ಶಾಲೆಯಲ್ಲಿ ಮೂಲ ದಾಖಲಾತಿಗಳು ಇವೆ ಎಂದರೆ ಸರಿ. 1965-66 ರಲ್ಲಿ ಆದಂತಹ ಠರಾವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಪರಿಶೀಲನೆ ಮಾಡಬೇಕು ಎಂದು ಹೇಳುತ್ತಾರೆ. ವಾದಿಯರು ಶಾಲೆಗೆ ಉಪಯೋಗಿಸಲು ಕೊಟ್ಟಿದ್ದರು ಎಂದು ತೋರಿಸುವ ದಾಖಲಾತಿಗಳು ನಿಮ್ಮ ಶಾಲೆಯಲ್ಲಿ ಇವೆಯಾ ಎಂದರೆ ಸಾಕ್ಷಿ ದಾವಾ ಸ್ವತ್ತು ವಾದಿಯರಿಗೆ ಸೇರಿವೆ ಎಂದು ತೋರಿಸುವ ದಾಖಲಾತಿಗಳು ಇಲ್ಲ ಎಂದು ಹೇಳುತ್ತಾರೆ. 1927 ರಿಂದ ನಮ್ಮ ಕಚೇರಿಯಲ್ಲಿ ದಾಖಲಾತಿಗಳು ಇವೆ. ನಮ್ಮ ಶಾಲೆಯ ಮಂಡಳಿಯವರು 1927 ರಲ್ಲಿ ಶಾಲೆಯ ಜಾಗೆಯನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ. 1927 ರಲ್ಲಿ ಕ್ರಯಕ್ಕೆ ತೆಗೆದುಕೊಳ್ಳಲಾಗಿದೆ ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸುತ್ತಿರಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎಂದು ಹೇಳುತ್ತಾರೆ. ನಾನು ಹಾಜರುಪಡಿಸಿದಂತಹ ದಾಖಲಾತಿಗಳು ಕನ್ನಡ

ಭಾಷೆಯಲ್ಲಿ ಇರುವುದರಿಂದ ನನಗೆ ಹೇಳಲು ಬರುವುದಿಲ್ಲ. ವಾದಿಗಳಿಗೆ ಸೇರಿದ ಆಸ್ತಿಯಲ್ಲಿ ಅರ್ಧ ಜಮೀನನ್ನು ನಮಗೆ ಉಪಯೋಗಿಸಲು ಕೊಟ್ಟಿದ್ದರು ಎಂದರೆ ಸರಿಯಲ್ಲ. ವಾದಿಗಳ ಅಜ್ಜ ನಮ್ಮ ಶಾಲೆಗೆ ಆಟದ ಮೈದಾನಕ್ಕಾಗಿ ಆಸ್ತಿಯನ್ನು ಕೊಡುವಾಗ ತನಗೆ ಅವಶ್ಯಕತೆ ಇದ್ದಾಗ ಮರಳಿ ಕೊಡಬೇಕು ಎಂಬ ಷರತ್ತಿನ ಮೇರೆಗೆ ಉಪಯೋಗಿಸಲು ಕೊಟ್ಟಿದ್ದರು ಎಂದರೆ ಸರಿಯಲ್ಲ. ವಾದಿಯರು ಮತ್ತು ಆಡಳಿತ ಮಂಡಳಿಯವರು ಸುಮಾರು 30 ವರ್ಷದ ಹಿಂದೆ ಆಸ್ತಿಗೆ ಸಂಬಂಧಪಟ್ಟಂತೆ ಯಾವ ಮಾತುಕತೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಬರುವ ಮುಂಚೆ ವಾದಿಯರು ನಮ್ಮ ಆಡಳಿತ ಮಂಡಳಿಗೆ ಜಮೀನನ್ನು ಬಿಟ್ಟು ಕೊಡಲು ಕೇಳಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ವಾದಿ ನಂ.2 ಅಪ್ಪಾ ಚಂದ್ರಹಾಸ ಅಣ್ವೇಕರ್ ಇವರು ನಾನು ಬಂದ ನಂತರ ಕಮೀಟಿಯಲ್ಲಿ ಬಂದು ಆಸ್ತಿಯನ್ನು ನಮಗೆ ಬಿಟ್ಟುಕೊಡಬೇಕು ಎಂದು ಕೇಳಿದ್ದರು ಎಂದರೆ ಸರಿಯಲ್ಲ. ದಿನಾಂಕ 31-05-2022 ರಂದು ಅಧ್ಯಕ್ಷರು ಮತ್ತು ಮುಖ್ಯೋಪಾಧ್ಯಾಯರಿಗೆ ಆಸ್ತಿಯನ್ನು ಬಿಟ್ಟು ಕೊಡಬೇಕು ಎಂದು ನೋಟಿಸ್‌ನ್ನು ಕಳುಹಿಸಿದ್ದರು ಎಂದರೆ ಸರಿಯಲ್ಲ. ನಿ.ಪಿ.14 ಮತ್ತು ನಿ.ಪಿ.15 ದಾಖಲಾತಿಗಳಲ್ಲಿ ಇರುವ ಸೀಲ್‌ಗಳು ನಮ್ಮ ಶಾಲೆಗೆ ಸೇರಿದ್ದು ಎಂದರೆ ಸರಿ. ವಾದಿಯರ ಜಮೀನನ್ನು ಬಿಟ್ಟುಕೊಡಬೇಕು ಎಂಬ ಉದ್ದೇಶದಿಂದ ನೋಟಿಸ್ ಕಳುಹಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ